ಇಂಗ್ಲೀಷ್‌ನಲ್ಲಿಯೇ ಕೊಡಬೇಕು. ಅಲ್ಲಿನ ನೌಕರರ ಮೇಲೆ ಏನಾದರೂ ಚಾರ್ಜ್‌ಷೀಟ್ ಹಾಕಿದರೂ ಕೂಡ ಅವರು ಕನ್ನಡದಲ್ಲಿ ಉತ್ತರ ಬರೆಯುವ ಹಾಗೆ ಇಲ್ಲ. ಕನ್ನಡದಲ್ಲಿ ಬರೆಯಬೇಕೆಂದು ಕೇಳುವ ಹಾಗೆಯೂ ಇಲ್ಲ. ನನಗೆ ಗೊತ್ತಿರುವ ಹಾಗೆ ಅಲ್ಲಿ ಕೆಲಸದಲ್ಲಿರುವವರ ಮೇಲಾಗಲೀ ಅಥವಾ ಕೆಲಸ ಬಿಡುವವರ ಮೇಲಾಗಲೀ ಏನೇ ಕ್ರಮ ನಡೆದರೂ ಕೂಡ ಕನ್ನಡದಲ್ಲಿ ನಡೆಯುವ ಹಾಗೆ ಇಲ್ಲ. ಇದರಿಂದ ಕೆಲಸಗಾರರಿಗೆ ಬಹಳ ತೊಂದರೆಯಾಗಿದೆ ಇದರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಪತ್ರ ವ್ಯವಹಾರ ನಡೆಸಿದ್ದೇವೆಂದು ಈಗ ಹೇಳುತ್ತಿದ್ದೀರಿ. ಅದಕ್ಕೇನಾದರೂ ಕೇಂದ್ರ ಸರ್ಕಾರದಿಂದ ಉತ್ತರ ಬಂದಿದೆಯೇ ಎಂಬುದನ್ನು ತಿಳಿಸಬೇಕು. ಆದರೆ ಅಲ್ಲಿ ಎಲ್ಲ ತರಹದ ವ್ಯವಹಾರಗಳನ್ನು ಇಂಗ್ಲೀಷ್ ಮತ್ತು ಹಿಂದಿ ಗೊತ್ತಿರುವವರೇ ಮಾಡಬೇಕಾಗುತ್ತದೆ. ಆದರೆ ಈ ಎರಡು ಭಾಷೆಗಳು ತಿಳಿಯದೇ ಇರತಕ್ಕ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ನೂಕ್ತ ಕ್ರಮ ತೆಗೆದುಕೊಳ್ಳಲು ಒಂದು ಹೊಸ ಸೂತ್ರವನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದೇವೆ. ಆದರೆ ಅದಕ್ಕೆ ಇದುವರೆಗೂ ಉತ್ತರ ಬಂದಿಲ್ಲ. ನೌಕರರು ಕನ್ನಡದಲ್ಲಿ ಅರ್ಜಿ ಕೊಟ್ಟರೆ ಅಲ್ಲಿ ಸ್ವೀಕರಿಸುವುದಿಲ್ಲವೆಂದು ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಪೂರ್ತಿ ಗಮನ ಕೊಟ್ಟು ಸೂಕ್ತ ಕ್ರಮ ಯಾವ ರೀತಿ ತೆಗೆದುಕೊಳ್ಳಬೇಕೋ ಆ ರೀತಿಯಾಗಿ ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ಸೆಕ್ಷನ್ 312ರ ಪ್ರಕಾರ ನಾನು ನಿನ್ನೆ ಒಂದು ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ನಾನೇ ಅದನ್ನು ಇನ್ನೂ ನೋಡಿಲ್ಲ. ನಾಳೆ ನೋಡೋಣ.

ಶ್ರೀ ಕೆ. ಎಚ್.—ಹನುಮೇಗೌಡ.—ಪೆಟರ್‌ನರಿ ಕಾಲೇಜಿನ 30 ಹುಡುಗರು ಉಪವಾಸ ಕುಳಿತು ಅವರ ಪೈಕಿ 2 ಹುಡುಗರು ಈಗಾಗಲೇ ಸಾಯುವ ಸ್ಥಿತಿಯಲ್ಲಿದ್ದಾರೆಂಬ ವರ್ತಮಾನ ನನಗೆ ಈಗ ಬಂದಿದೆ. ಆ ಹುಡುಗರ ಗತಿ ಏನು? ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈಗ ಇಲ್ಲಿಯೇ ಇದ್ದಾರೆ. ಆದ್ದರಿಂದ ಅವರ ಬಗ್ಗೆ ಈಗ ತಕ್ಷಣ ಏನಾದರೂ ವ್ಯವಸ್ಥೆ ಮಾಡದಿದ್ದರೆ ಆ ಹುಡುಗರೂ ಸಹ ತೀರಿ ಹೋಗುತ್ತಾರೆ.

ಶ್ರೀ ಬಿ. ವಿ. ಕಕ್ಕೇರಾಯ.—ಇಂದೂ ಕೂಡ ಇನ್ನು 2–3 ಹುಡುಗರು ಅಂತಹ ಸ್ಥಿತಿಯಲ್ಲಿಯೇ ಇದ್ದಾರೆ.

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಮುಖ್ಯಮಂತ್ರಿಗಳೇ ಮೊನ್ನೆ ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ನಾನೂ ಕೂಡ ಹೇಳಿದ್ದೇನೆ. ಆದರೆ ಈ ರೀತಿ ಮುಷ್ಕರ ಹೂಡಬೇಡಿ we are at it ಎಂದು ಹೇಳಿದ್ದೇವೆ. Now we are at it. ಮುಷ್ಕರ ಹೂಡಬೇಡಿ, ಅದನ್ನು ಬಿಟ್ಟುಬಿಡಿ ಎಂದು ಹೇಳಿದ್ದೇವೆ. ಆದ್ದರಿಂದ ತಾವು ಮಾನ್ಯ ಸದಸ್ಯರಿಗೆ ಈ ವಿಚಾರವಾಗಿ ಸ್ವಲ್ಪ ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ.—ಸಂಬಂಧಪಟ್ಟ ಮಂತ್ರಿಗಳು ಇಲ್ಲಿಂದ ಯಾರನ್ನಾದರೂ ಅಲ್ಲಿಗೆ ಕಳುಹಿಸಿ ಅವರಿಗೆ ಹೇಳಬೇಕು.

ಶ್ರೀ ಬಿ. ಜಿ. ಬಣಕಾರ್.—ನಾವು ನೀವು ಇಬ್ಬರೂ ಹೋಗೋಣ

ಅಧ್ಯಕ್ಷರು.—ಈಗಲೇ ಅವರನ್ನು ಕರೆದುಕೊಂಡು ಹೋಗಿ.

Thirty first Report o the Committee on Private Members Bills and Resolutions

PRESENTATION

SRI G POTTASWAMY (Deputy Speaker).—I present—"The 31st Report of the Committee on Private Members Bills and Resolutions."

SRI B. BYRAPPAJI.—I beg to move.

"That this Assembly agrees with the 31st Report of the Private Members Bills and Resolutions,"

MADAM SPEAKER.—I think the House agrees with the Report.

H.N. MEMBERS.—Yes.

Prices of Varalakshmi Cotton Seeds

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ತಮ್ಮಲ್ಲಿ ಒಂದು ಕೋರಿಕೆ. ಈಗಾಗಲೇ ವ್ಯವಸಾಯ ಸಚಿವರಿಗೂ ಆ ವಿಚಾರವನ್ನು ತಿಳಿಸಿದ್ದೇನೆ. ವರಲಕ್ಷ್ಮಿ ಹತ್ತಿ ಬೀಜ ಉತ್ಪಾದನೆ ಮಾಡುವಂತಹ ರೈತರು ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಿದ್ದಾಗ್ಯೂ ರೈತರು ಬೆಳೆದ ಹತ್ತಿ ಬೀಜವನ್ನು ಸರ್ಕಾರದವರು ಕೊಂಡುಕೊಂಡು ಅವರಿಗೆ ಕೊಡಬೇಕಾದ ಹಣವನ್ನು ಇದುವರೆಗೂ ಕೊಟ್ಟಿಲ್ಲ. ಆದ್ದರಿಂದ ಇವತ್ತು ಅವರೂ ಸಹ ವಿಧಾನ ಸೌಧದ ಹೊರಗಡೆ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಹೊರಟಿದ್ದಾರೆ. 1974–75ರಲ್ಲಿ ನಮ್ಮ ಸರ್ಕಾರ ರಾಜ್ಯದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಹಾಗೂ ಸೀಡ್ಸ್ ಮಾರ್ಕೆಟಿಂಗ್ ಫೆಡರೇಷನ್ ಮುಖೇನ ಬೀಜ ತೆಗೆದುಕೊಂಡು ವರಲಕ್ಷ್ಮಿ ಹತ್ತಿಯನ್ನು ರಾಜ್ಯದ 4,200 ಪ್ಲಾಟ್‌ಗಳಲ್ಲಿ ಬೆಳೆಸಿದ್ದಾರೆ. ಆದರಲ್ಲಿ ಮೊದಲನೆಯ ವರ್ಷ ಬಹಳ ಚೆನ್ನಾಗಿ ಸಂಪಾದನೆ ಮಾಡಿಕೊಂಡರು. ಎರಡನೆಯ ವರ್ಷ ಕೈ ಸುಟ್ಟುಕೊಂಡರು. ನಾನು ವ್ಯವಸಾಯ ಸಚಿವರ ಥೋರಣಿಯ ಬಗ್ಗೆ ಆಕ್ಷೇಪಣೆ ಮಾಡಲಿಲ್ಲ. ಕೆಲವರಿಗೆ ಒಂದು ಕೆ.ಜಿ ಗೆ 100 ರೂಪಾಯಿಗಳನ್ನೂ, ಇನ್ನು ಕೆಲವರಿಗೆ 50 ರೂಪಾಯಿಗಳನ್ನೂ ಕೊಟ್ಟು ಬಾಕಿ ಹಣವನ್ನು ಕೊಡುವ ಬಗ್ಗೆ ಔದಾರ್ಯ ತೋರಿಸಿಲ್ಲ. ಇದಕ್ಕೆ ಕಾರಣ ಏನು? ಇಂತಹ ವಿಳಂಬ ಧೋರಣೆ ಸರಿಯಾಗಿಲ್ಲ. ಆದ್ದರಿಂದ ರೈತರು ವಿಧಾನ ಸೌಧದ ಹತ್ತಿರ ಬಂದು ಸತ್ಯಾಗ್ರಹ ಮಾಡುವ ಮಟ್ಟಕ್ಕೆ ಸರ್ಕಾರ ಇಳಿಯಬಾರದು. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವವರಿಂದಲೇ ನಾವು ಬದುಕಿರುವುದು. ರೈತರು ಬೆಳೆಯಬೇಕು ನಿಮಗೆ ಕೊಡಬೇಕೆಂಬುದಾಗಿ ಇಲ್ಲಿ ಎಷ್ಟೋ ಸಾರಿ ಭಾಷಣ ಮಾಡಿದ್ದಾಯಿತು ಆದ್ದರಿಂದ ಅಂತಹ ರೈತರ ಬಗ್ಗೆ ಇಷ್ಟು ಉಪೇಕ್ಷೆ ಬೇಡ. ತಾವೇ ರೈತರಾಗಿ ಈಗಾಗಲೇ ರೈತರ ಕಷ್ಟ ಸುಖಗಳನ್ನು ತಿಳಿದಂಥವರಾಗಿದ್ದೀರಿ. ಇದರ ಬಗ್ಗೆ ಹಣಕಾಸು ಇಲಾಖೆಯನ್ನು ಸ್ವಲ್ಪಮಟ್ಟಿಗೆ ಟೀಕೆ ಮಾಡಬೇಕೋ ಏನೋ ಗೊತ್ತಿಲ್ಲ. ಅವರದು ಅನ್‌ಅರ್ನ್‌ಯೆಡ್ ಸೆಕ್ಟರ್ ಆಗಿದೆ. ಶ್ರೀಮಾನ್ ಫೋರ್ಡ್ ಡೆಯವರು ರೈತರನ್ನು ನೆನಸಿಕೊಂಡು ಇನ್ನೂ ಯಾವ ಯಾವ ಟ್ಯಾಕ್ಸನ್ನು ಹಾಕಬೇಕೋ ಎಂದು ಹುಡುಕುತ್ತಿದ್ದಾರೆಂದು ನನಗೆ ಕಾಣುತ್ತದೆ. ಶ್ರೀಮಾನ್ ಫೋರ್ಡ್‌ಡೆಯವರು ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಓದಿಕೊಂಡು ಬಂದಿರುವವರು ರೈತರ ಬಗ್ಗೆ ಹೆಚ್ಚಿಗೆ ಹಣವನ್ನು ಕೊಡುವಾಗ ಅವರಿಗೆ ಬಹಳ ಕಷ್ಟವಾಗುತ್ತದೆಂದು ಕಾಣುತ್ತದೆ. ಈ ಸಭೆಯಲ್ಲಿ ರೈತರಿಗೆ ಉಳಿದ ಹಣವನ್ನು ಜಾಗ್ರತೆಯಾಗಿ ಕೊಡುವ ಬಗ್ಗೆ ಅವರು ಸ್ಪಷ್ಟವಾಗಿ ಹೇಳಿದ್ದೇ ಹೋದರೆ ನಮಗೆ ಪಿ ಡಬ್ಲ್ಯು ಡಿ. ದಿವ್ಯಾಂಡ್ ಬೇಡ, ನಾವು ಅತಿರೇಕಕ್ಕೆ ಹೋಗಬೇಕಾಗುತ್ತದೆ ಇದರ ಬಗ್ಗೆ ಯಾವ ಒಂದು ವಸೂಲಿ ಬಾಬಿ ಕೆಲಸ ಮಾಡಿ ಎಂಬುದಾಗಿಯೂ ನಾವು ಯಾರೂ ಹೇಳುವುದಿಲ್ಲ.

ಎಲ್ಲೋ ಬಿಜಾಪುರ ಮತ್ತು ಬೆಳಗಾಂ ಕಡೆಯಿಂದ ಬಂದವರ ನಾನು ನಿನ್ನೆ ಸಂಜೆ ಸಭೆಯನ್ನು ಮುಗಿಸಿಕೊಂಡು ಹೋಗುವಾಗ ನನ್ನನ್ನು ಮುತ್ತಿಕೊಂಡು ಬಿಟ್ಟರು. ಅವರಿಗೆ 10–50 ಸಾವಿರ ಆಥವಾ ಒಂದು ಕೋಟಿ ರೂಪಾಯಿ ಕೊಡಬೇಕೋ ಏನೋ ಅವರಿಂದ ಬೀಜವನ್ನು ತೆಗೆದುಕೊಂಡಿದ್ದೀರಿ? ಮಾನ್ಯ ಪುಟ್ಟಸ್ವಾಮಿಯವರು ಕೊಟ್ಟಿರತಕ್ಕಂಥ ವರದಿಯಲ್ಲಿ ನಾವು ನೋಡಿದ್ದೇವೆ. ತಾವು ಎಷ್ಟೋ ಹಣವನ್ನು ದೊಡ್ಡದೊಡ್ಡ ಜನರಿಗೆ ಕೊಟ್ಟಿದ್ದೀರಿ. ಒಳ್ಳೆಯ ಏರಕಂಡೀಷನ್ಡ್ ಟಿ. ಬಿ. ಗಳಲ್ಲಿ ಇರುತ್ತಾರೆ, ಗಗನನಖಿಯರಿಗೆ ಕೊಡಬೇಕಾಗುತ್ತದೆ. ಪುಟ್ಟ ಸ್ವಾಮಿಯವರು ಎಷ್ಟು ಹಣ ಈ ರೀತಿ ಹೋಗಿದೆ ಎಂದು ಹೇಳಿರುತ್ತಾರೆ. ನಮ್ಮ ರೈತ ಅವನ ಹೆಂಡತಿ ರೊಟ್ಟಿ ತೆಗೆದುಕೊಂಡು ಹೊಲಕ್ಕೆ ಹೋಗುತ್ತಾರೆ. ಅವರಿಗೆ ಹಣ ಎಲ್ಲಿ ಬರಬೇಕು?